4

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 9/12/2020

# 22 ಇಲಾಖೆಗಳಲ್ಲಿ ಇನ್ನೂ ಸಿದ್ಧವಾಗದ ಜ್ಯೇಷ್ಠತಾಪಟ್ಟಿ

ಶ್ರೀಕಾಂತ್ ಶೇಷಾದ್ರಿ ಬೆಂಗಳೂರು

ರಾಜ್ಯದ ಶೇ.60 ಇಲಾಖೆಗಳಲ್ಲಿ ಜ್ಯೇಷ್ಠತಾ ಪಟ್ಟಿ ಮರು ಅವಲೋಕಿಸುವ ಸೂಚನೆ ಪಾಲಿಸದಿರುವುದಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಸಮಾಧಾನ ವ್ಯಕ್ತಪಡಿಸಿದ್ದು, ಗಂಭೀರವಾಗಿ ಪರಿಗಣಿಸಿರುವುದಾಗಿ ಎಲ್ಲ ಇಲಾಖಾ ಮುಖ್ಯಸ್ಥರಿಗೆ ಎಚ್ಚರಿಸಿದೆ.

ಬಿ.ಕೆ.ಪವಿತ್ರ ಪ್ರಕರಣದಲ್ಲಿ 2019ರ ಮೇ 10ರಂದು ಸುಪ್ರೀಂ ಕೋರ್ಟ್ ಮೀಸಲು ಬಡ್ತಿ ಸಂಬಂಧ ತನ್ನ ನಿಲುವನ್ನು ಸ್ಪಷ್ಟಪಡಿಸಿತ್ತು. 'ರಾಜ್ಯ ಸರ್ಕಾರ ರಚಿಸಿದ್ದ (ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜ್ಯೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ'ವನ್ನು ನ್ಯಾಯಾಲಯ ಎತ್ತಿ ಹಿಡಿದಿತ್ತು. ಅದರ ಪ್ರಕಾರ ಎಲ್ಲ ವೃಂದಗಳ ಜ್ಯೇಷ್ಠತಾ ಪಟ್ಟಿಗಳನ್ನು ಪುನರಾವಲೋಕಿಸಿ ಅಂತಿಮ ಜ್ಯೇಷ್ಠತಾ ಪಟ್ಟಿ ತಯಾರಿಸಿ ಪ್ರಕಟಿಸುವಂತೆ ಸೂಚನೆ ನೀಡಿತ್ತು.

> **ಮುಖ್ಯ ಕಾರ್ಯದರ್ಶಿ ಆದೇಶವೇ 8 ತಿಂಗಳಾದರೂ ಜಾರಿಯಾಗಿಲ್ಲ ಎಂದರೆ ಏನೆನ್ನಬೇಕು. ಅವರ ಆದೇಶ ಜಾರಿಯಾದರೆ ಎಸ್ಸಿ-ಎಸ್ಟಿ ನೌಕರರಿಗೆ ಅನುಕೂಲವಾಗುತ್ತದೆ ಎಂದು ಹೀಗೆ ತಡ ಮಾಡುತ್ತಿದ್ದಾರೆಯೇ ಎಂಬ ಅನುಮಾನವಿದೆ. ಇನ್ನಾದರೂ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಂಡು ತಪ್ಪುಸರಿಪಡಿಸಲಿ.**
> | ಚಂದ್ರಶೇಖರಯ್ಯ
> ಎಸ್ಸಿ-ಎಸ್ಟಿ ನೌಕರರ ಸಂಘ

ನ್ಯಾಯಾಲಯದ ಸೂಚನೆಯಂತೆ ಮುಖ್ಯಕಾರ್ಯದರ್ಶಿ 2019ರ ಮೇ 15 ರಂದು ಆದೇಶ ಹೊರಡಿಸಿ, ಮುಂದಿನ 30 ದಿನಗಳೊಳಗೆ ಎಲ್ಲಾ ಇಲಾಖೆಗಳು ಜ್ಯೇಷ್ಠತಾ ಪಟ್ಟಿ ಮರು ಅವಲೋಕಿಸಿ ಹಿಂಬಡ್ತಿಗೊಂಡಿದ್ದ ಎಸ್ಸಿ-ಎಸ್ಟಿ ನೌಕರರಿಗೆ ಪುನಃ ಮುಂಬಡ್ತಿ ನೀಡಿ ಸರಿಪಡಿಸುವಂತೆ ಸೂಚನೆ ನೀಡಿದ್ದರು. ಆದರೆ, ಈ ಆದೇಶ ಹೊರಟು ಎಂಟು ತಿಂಗಳಾದರೂ ಅರ್ಧಕ್ಕಿಂತ ಹೆಚ್ಚು ಇಲಾಖೆಗಳಲ್ಲಿ ಮುಖ್ಯಕಾರ್ಯದರ್ಶಿ ಆದೇಶ ಜಾರಿಯಾಗಿಲ್ಲ.

ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸಭೆಯಲ್ಲೂ ಈ ವಿಷಯ ಚರ್ಚೆ ನಡೆಸಲಾಗಿತ್ತು. ಹಲವಾರು ಇಲಾಖೆಗಳಲ್ಲಿ ಜ್ಯೇಷ್ಠತಾ ಪಟ್ಟಿ ಅಂತಿಮಗೊಳಿಸದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತ್ತು. ಇದೀಗ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸರ್ಕಾರದ 22 ಇಲಾಖೆಗಳ ಅಪರ ಮುಖ್ಯಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗೆ ಪತ್ರ ಬರೆದು ಜ್ಯೇಷ್ಠತಾಪಟ್ಟಿ ಮಾಡದ ಬಗ್ಗೆ ಎಚ್ಚರಿಕೆ ಸಂದೇಶ ನೀಡಿದೆ.

## ಶೀಘ್ರದಲ್ಲೇ ಕ್ರಮಕ್ಕೆ ಸೂಚನೆ

**'ಜ್ಯೇಷ್ಠತಾಪಟ್ಟಿಗಳನ್ನು ಅಂತಿಮಗೊಳಿಸಿ ಪ್ರಕಟಿಸುವಂತೆ ಹಲವಾರು ಬಾರಿ ಸೂಚನೆಗಳನ್ನು ನೀಡಿದ್ದರೂ ಆಡಳಿತ ಇಲಾಖೆಗಳು ಕ್ರಮ ವಹಿಸದಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ. ವೈಯಕ್ತಿಕವಾಗಿ ಗಮನ ಹರಿಸಿ ಶೀಘ್ರದಲ್ಲೇ ಅಗತ್ಯ ಕ್ರಮಕೈಗೊಳ್ಳಬೇಕು ಮತ್ತು ಕೈಗೊಂಡ ಕ್ರಮದ ಮಾಹಿತಿಯನ್ನು ನೀಡಬೇಕು' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿ ಪಿ.ಹೇಮಲತಾ ಸೂಚನಾ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ತೋಟಗಾರಿಕೆ, ವಾಣಿಜ್ಯ ಮತ್ತು ಕೈಗಾರಿಕೆ ನಿರ್ದೇಶನಾಲಯ, ಪ್ರವಾಸೋದ್ಯಮ, ಉನ್ನತ ಶಿಕ್ಷಣ, ಕೃಷಿ, ಮೂಲ ಸೌಲಭ್ಯ, ಕಾರ್ಮಿಕ, ಕಾನೂನು, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಆರ್ಥಿಕ, ಸಾರಿಗೆ, ಯೋಜನೆ ಸಾಂಖ್ಯಿಕ, ಸಹಕಾರ, ಮಾಹಿತಿ ತಂತ್ರಜ್ಞಾನ, ಇಂಧನ, ಕೌಶಲಾಭಿವೃದ್ಧಿ, ಶಿಕ್ಷಣ, ನಗರಾಭಿವೃದ್ಧಿ, ಒಳಾಡಳಿತ, ಕಂದಾಯ, ಆಹಾರ ಇಲಾಖೆಯಲ್ಲಿ ಜೇಷ್ಠತಾಪಟ್ಟಿ ಮಾಡಿಲ್ಲ ಎಂಬುದನ್ನು ಡಿಪಿಎಆರ್ ಗುರುತಿಸಿದೆ.**